## ಕ್ರಿಯಾಪದಗಳು

ಕ್ರಿಯೆ ಪೂರ್ಣಗೊಂಡಿದೆ ಎಂದು ತಿಳಿಸುವ ಪದಗಳೇ ಕ್ರಿಯಾಪದಗಳಾಗಿವೆ.

ಉದಾ – ತಂದೆ ಕೆಲಸ **ಮಾಡಿದನು. – ಕ್ರಿಯಾಪದ**

ಅವನು ಊಟ **ಮಾಡುವನು.** –ಕ್ರಿಯಾಪದ

ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುವರು. ಇದನ್ನು ಕ್ರಿಯಾಪ್ರಕೃತಿ ಎನ್ನುವರು.

ರೈತರು ಹೊಲದಲ್ಲಿ ದುಡಿಯುತ್ತಾರೆ

ಮಕ್ಕಳು ಆಟ ಆಡುವರು.

ನಾನು ದಿನಾಲು ದಿನಪತ್ರಿಕೆ ಓದುತ್ತೇನೆ.

ಶಿಲ್ಪಿಗಳು ಗುಡಿಯನ್ನು ಕಟ್ಟಿದರು.

ಈ ಮೇಲಿನ ವಾಕ್ಯಗಳಲ್ಲಿನ ದುಡಿಯುತ್ತಾರೆ , ಆಡುವರು, ಓದುತ್ತೇನೆ ಈ ಕ್ರಿಯಾಪದಗಳ ಧಾತುರೂಪ ದುಡಿ, ಆಡು, ಓದು

ಧಾತುವಿನಲ್ಲಿ ಎರಡು ವಿಧ

ಸಕರ್ಮಕ ಧಾತು – ಕರ್ಮಪದವನ್ನು ಬಯಸುವ ಧಾತುಗಳೇ ಸಕರ್ಮಕ ಧಾತುಗಳು

ಉದಾ– ರಾಮನು ಗಿಡವನ್ನು ನೆಟ್ಟನು.

ವಿದ್ಯಾರ್ಥಿಗಳು ಪಾಠವನ್ನು ಓದಿದರು.

ಅಕರ್ಮಕ ಧಾತು – ಕರ್ಮಪದವನ್ನು ಬಯಸದೇ ಇರುವ ಧಾತುಗಳೇ ಅಕರ್ಮಕ ಧಾತುಗಳು.

ಉದಾ – ಕೂಸು ಮಲಗಿತು.

ಆಕಾಶ ಹೊಳೆಯುತ್ತಿದೆ.

## ಕ್ರಿಯಾಪದದ ರೂಪಗಳು

*1. **ವಿಧ್ಯರ್ಥಕ ಕ್ರಿಯಾಪದಗಳು** – ಆಶೀರ್ವಾದ, ಅಪ್ಪಣೆ, ಹಾರೈಕೆ, ಸಮ್ಮತಿ ಇತ್ಯಾದಿ ಹೊಂದಿರುವ ಕ್ರಿಯಾಪದಗಳೇ ವಿಧ್ಯರ್ಥಕ ಕ್ರಿಯಾಪದಗಳು.

ಉದಾ– 1. ಅವರು ಪಾಠವನ್ನು ಓದಲಿ.

2. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ

3. ಎಲ್ಲರಿಗೂ ಶುಭವಾಗಲಿ

4. ಎಲ್ಲರೂ ಅಲ್ಲಿಯೇ ನಿಲ್ಲಿರಿ.

**2. ನಿಷೇಧಾರ್ಥಕ ಕ್ರಿಯಾಪದಗಳು–** ಕ್ರಿಯೆಯು ನಡೆಯುವುದಿಲ್ಲ ಎಂಬ ಅರ್ಥವನ್ನು ಸೂಚಿಸುವ ಕ್ರಿಯಾಪದಗಳೇ ನಿಷೇಧಾರ್ಥಕ ಕ್ರಿಯಾಪದಗಳು.

ಉದಾ 1. ಕೃಷ್ಣನು ಹಣ್ಣನ್ನು ತಿನ್ನನು.

2. ಕಮಲೆಯು ಆಟಕ್ಕೆ ಬಾರಳು.

3. ಅವರು ಪುಸ್ತಕವನ್ನು ಓದರು.

3. **ಸಂಭವನಾರ್ಥಕ ಕ್ರಿಯಾಪದಗಳು–** ಕ್ರಿಯೆ ನಡೆಯುವ ಬಗ್ಗೆ ಸಂಶಯ ಅಥವಾ ಊಹೆಯನ್ನು ವ್ಯಕ್ತಪಡಿಸುವಂತಹ ಪದಗಳೇ ಕ್ರಿಯಾಪದಗಳಾಗಿವೆ.

## ಗಾದೆ ಮಾತುಗಳು

*ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ತುಂಬಿದ ಕೊಡ ತುಳುಕುವುದಿಲ್ಲ.

### 1.ತುಂಬಿದ ಕೊಡ ತುಳುಕುವುದಿಲ್ಲ.

**ಅರ್ಥ** – ತುಂಬಿದ ಕೊಡವು ಬುದ್ಧಿವಂತಿಕೆಯ ಅರ್ಥವನ್ನು, ಅರ್ಧ ತುಂಬಿದ ಕೊಡವು ಅಹಂಕಾರದ ಅಥವಾ ಅಜ್ಞಾನದ ಅರ್ಥ ಕೊಡುತ್ತದೆ.

**ವಿವರಣೆ–** ಪ್ರಪಂಚವನ್ನು ಅರಿತವನು ಕ್ಷಮೆ, ಸದ್ಗುಣಗಳನ್ನು ಕಲಿತು ನೆಮ್ಮದಿಯಿಂದ ಬಾಳಲು ಪ್ರಯತ್ನಿಸುತ್ತಾನೆ. ಪೂರ್ತಿ ಜ್ಞಾನ ಪಡೆದವನು ಪರರಿಗೆ ಉಪಕಾರಿಯಾಗಿ ಬಾಳುತ್ತಾನೆ. ಹಾಗೆಯೇ ಇಂತವರು ಅಹಂಕಾರ ಪಡದೆ ಸಮಯ,ಸಂದರ್ಭ ಬಂದಾಗ ಮಾತ್ರ ಮಾತನಾಡಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸುತ್ತಾರೆ. ಇಂತವರನ್ನು ತುಂಬಿದ ಕೊಡಕ್ಕೆ ಹೋಲಿಸಲಾಗಿದೆ. ಇನ್ನು ಕೆಲವೊಂದಷ್ಟು ಜನ ಯಾವಾಗಲೂ ತಮ್ಮಲ್ಲಿ ಇಲ್ಲದ ಗುಣವನ್ನು ಹೆಚ್ಚಿಸಿ ಹೇಳುತ್ತಾನೆ.ತಾವೇ ಬುದ್ಧಿವಂತರು ಎಂಬಂತೆ

ಜಂಭಕೊಚ್ಚಿಕೊಳ್ಳುತ್ತಾರೆ. ಅಂತವರನ್ನು ಅರ್ಧತುಂಬಿದ ಕೊಡಕ್ಕೆ ಹೋಲಿಸಲಾಗಿದೆ. ಅಗತ್ಯ ಬಿದ್ದಾಗ ಮಾತ್ರ ನಮ್ಮ ವಿದ್ಯೆಯನ್ನು ಪ್ರದರ್ಶಿಸಬೇಕು ಎಂಬುದೇ ಈ ಗಾದೆ ಮಾತಿನ ಅರ್ಥವಾಗಿದೆ.

## 2.ಬೆಳ್ಳಗಿರುವುದೆಲ್ಲ ಹಾಲಲ್ಲ

**ಅರ್ಥ** – ವಸ್ತುವಿನ ಮತ್ತು ವ್ಯಕ್ತಿಯ ಹೊರ ಬಣ್ಣವನ್ನು ನೋಡಿ ಬೆಲೆ ಕೊಡುವುದು, ಗೌರವಿಸುವುದು ಅಪಾಯಕರ.

**ವಿವರಣೆ–** ಬುದ್ಧಿವಂತಿಕೆ ಎಚ್ಚರಿಕೆಯ, ಪ್ರಜ್ಞೆಯನ್ನು ಯಾರು ಬೆಳೆಸಿಕೊಳ್ಳುತ್ತಾರೋ ಅವರಿಗೆ ಮಾತ್ರ ಬದುಕಿನಲ್ಲಿ ಸೋಲಾಗುವುದಿಲ್ಲ.ಹಾಲು ಇದೊಂದು ಭೂಮಿಯ ಮೇಲಿನ ಅಮೃತ, ಸಮತೂಕ ಹೊಂದಿರುವ ಆಹಾರವು ಹೌದು ಹಾಲನ್ನು ಕುಡಿಯುತ್ತೇವೆ ಎಂದು ಬೆಳ್ಳಗಿರುವ ಸುಣ್ಣದ ನೀರನ್ನು ಕುಡಿಯಲು ಸಾಧ್ಯವೇ

ಉದಾ– ಕಾಗೆಯು ಕಪ್ಪಗಿರುತ್ತದೆ, ಕೋಗಿಲೆಯು ಕಪ್ಪಗಿರುತ್ತದೆ ಆಧರೆ ಎರಡು ಒಂದೇ ಆಗುವುದಕ್ಕೆ ಸಾಧ್ಯವಿಲ್ಲ.

ಮನುಷ್ಯರ ಬಾಹ್ಯನೋಟಕ್ಕೆ ಮರುಳಾಗದೇ ಸೂಕ್ಷ್ಮವಾಗಿ ಗಮನಿಸಿ ನಿರ್ಧಾರ ಮಾಡಬೇಕು ಇಲ್ಲದಿದ್ದರೆ ಮೋಸಹೋಗ ಬೇಕಾಗುತ್ತದೆ. ಎಂಬುದೇ ಈ ಗಾದೆಮಾತಿನ ಆರ್ಥವಾಗಿದೆ.

## 3.ವಿಭಕ್ತಿ ಪ್ರತ್ಯಗಳು

*ನಾಮ ಪ್ರಕೃತಿಗಳ ಮುಂದೆ ವಿವಿಧ ಅರ್ಥಗಳಲ್ಲಿ ಕರ್ತೃ , ಕರ್ಮ ಕ್ರಿಯೆಗಳಿಗಿರುವ ಸಂಬಂಧವನ್ನು ತಿಳಿಸುವ ಪ್ರತ್ಯಗಳು ವಿಭಕ್ತಿ ಪ್ರತ್ಯಗಳು ಎನಿಸುವವು.

ಹೊಸಗನ್ನಡ ಹಾಗೂ ಹಳೆಗನ್ನಡದಲ್ಲಿನ ವಿಭಕ್ತಿ ಪ್ರತ್ಯಯಗಳು

| | **ವಿಭಕ್ತಿ** | **ಹೊಸಗನ್ನಡ** | **ಹಳೆಗನ್ನಡ** |
|---|---|---|---|
| 1 | ಪ್ರಥಮಾ | ಉ | ಮ್ |
| 2 | ದ್ವಿತೀಯ | ಅನ್ನು | ಅಂ |
| 3 | ತೃತೀಯ | ಇಂದ | ಇಂ,ಇಂದಂ |
| 4 | ಚತುರ್ಥಿ | ಗೆ,ಇಗೆ,ಕ್ಕೆ,ಅಕ್ಕೆ | ಗೆ,ಕೆ, ಕ್ಕೆ |
| 5 | ಪಂಚಮಿ | ದಸೆಯಿಂದ | ಅತ್ತಣಿಂ |
| 6 | ಷಷ್ಠಿ | ಅ | ಅ |
| 7 | ಸಪ್ತಮಿ | ಅಲ್ಲಿ | ಒಳ್ |

ಉದಾ –1

| | ವಿಭಕ್ತಿ | ಕಾರಕಾರ್ಥ | **ಹೊಸಗನ್ನಡ ಪ್ರತ್ಯಯ** | **ರೂಪ** | **ಹಳೆಗನ್ನಡ ಪ್ರತ್ಯಯ** | **ರೂಪ** |
|---|---|---|---|---|---|---|
| 1 | ಪ್ರಥಮಾ | ಕರ್ತ್ರಾರ್ಥ | ಉ | ರಾಮನು | ಮ್ | ರಾಮಮ್ |
| 2 | ದ್ವಿತೀಯ | ಕರ್ಮಾರ್ಥ | ಅನ್ನು | ರಾಮನನ್ನು | ಅಂ | ರಾಮನಂ |
| 3 | ತೃತೀಯ | ಕರಣಾರ್ಥ | ಇಂದ | ರಾಮನಿಂದ | ಇಂ,ಇಂದಂ | ರಾಮನಿಂ |
| 4 | ಚತುರ್ಥಿ | ಸಂಪ್ರದಾನ | ಗೆ,ಇಗೆ,ಕ್ಕೆ,ಅಕ್ಕೆ | ರಾಮನಿಗೆ | ಗೆ,ಕೆ, ಕ್ಕೆ | ರಾಮಂಗೆ |
| 5 | ಪಂಚಮಿ | ಅಪಾದನ | ದಸೆಯಿಂದ | ರಾಮನದೆಸೆಯಿಂದ | ಅತ್ತಣಿಂ | ರಾಮನತ್ತಣಿಂ |
| 6 | ಷಷ್ಠಿ | ಸಂಬಂಧ | ಅ | ರಾಮನ | ಅ | ರಾಮನ |
| 7 | ಸಪ್ತಮಿ | ಅಧಿಕರಣ | ಅಲ್ಲಿ | ರಾಮನಲ್ಲಿ | ಒಳ್ | ರಾಮನೊಳ್ |

ಉದಾ –2

| | ವಿಭಕ್ತಿ | ಕಾರಕಾರ್ಥ | **ಹೊಸಗನ್ನಡ ಪ್ರತ್ಯಯ** | **ರೂಪ** | **ಹಳೆಗನ್ನಡ ಪ್ರತ್ಯಯ** | **ರೂಪ** |
|---|---|---|---|---|---|---|
| 1 | ಪ್ರಥಮಾ | ಕರ್ತ್ರಾರ್ಥ | ಉ | ಅರಸನು | ಮ್ | ಅರಸಂ |
| 2 | ದ್ವಿತೀಯ | ಕರ್ಮಾರ್ಥ | ಅನ್ನು | ಅರಸನನ್ನು | ಅಂ | ಅರಸನಂ |
| 3 | ತೃತೀಯ | ಕರಣಾರ್ಥ | ಇಂದ | ಅರಸನಿಂದ | ಇಂ,ಇಂದಂ | ಅರಸನಿಂದಂ |
| 4 | ಚತುರ್ಥಿ | ಸಂಪ್ರದಾನ | ಗೆ,ಇಗೆ,ಕ್ಕೆ,ಅಕ್ಕೆ | ಅರಸನಿಗೆ | ಗೆ,ಕೆ, ಕ್ಕೆ | ಅರಸಂಗೆ |
| 5 | ಪಂಚಮಿ | ಅಪಾದನ | ದಸೆಯಿಂದ | ಅರಸನದೆಸೆಯಿಂದ | ಅತ್ತಣಿಂ | ಅರಸನತ್ತಣಿಂ |
| 6 | ಷಷ್ಠಿ | ಸಂಬಂಧ | ಅ | ಅರಸನ | ಅ | ಅರಸನ |
| 7 | ಸಪ್ತಮಿ | ಅಧಿಕರಣ | ಅಲ್ಲಿ | ಅರಸನಲ್ಲಿ | ಒಳ್ | ಅರಸನೊಳ್ |